4. ಅಧ್ಯಕ್ಷರ ಅಪ್ಪಣೆಯ ಮೇರೆಗೆ:

ವಿಷಯ: ರಾಮಜನ್ಮ ಭೂಮಿ ಸಂಕೀರ್ಣದಲ್ಲಿ ಉಗ್ರಗಾಮಿಗಳ ಹತ್ಯೆ ಮತ್ತು ಕರ್ನಾಟಕದಲ್ಲಿ ಈ ಬಗ್ಗೆ ಬಂದೋಬಸ್ತು ಮಾಡುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ಬಹಳ ಪ್ರಮುಖವಾಗಿರತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಚೆಪಡುತ್ತೇನೆ. ಈಗ ತಾನೆ ಹೊರಗಡೆ ಹೋಗುತ್ತಿದ್ದಂತೆಯೆ ಎಲ್ಲಾ ಕಡೆ ಒಂದು ರೀತಿಯ ಆತಂಕದ ವಾತಾವರಣ ಇದೆ. ರಾಮಜನ್ಮ ಭೂಮಿ ಸಂಕೀರ್ಣದಲ್ಲಿ ಐದು ಜನ ಉಗ್ರಗಾಮಿಗಳು ಬೆಳಿಗ್ಗೆ 9–30ಕ್ಕೆ ನುಗ್ಗಿದ್ದಾರೆ. ಅದೃಷ್ಟವಶಾತ್ ಅವರನ್ನು ಕೊಂದುಹಾಕಿದ್ದಾರೆ. ಆತ್ಮಹತ್ಯೆ ಬಾಂಬ್ ಅನ್ನು ಇಟ್ಟುಕೊಂಡಿದ್ದ ವ್ಯಕ್ತಿಯೊಬ್ಬನನ್ನೂ ಕೊಂದು ಹಾಕಿದ್ದಾರೆ. ಪೋಲಿಸ್‌ನವರು ಭದ್ರತಾ ಸಿಬ್ಬಂದಿ ಗುಂಡಿನ ದಾಳಿ ಮಾಡಿದ್ದಾರೆ. ಪ್ರಾಣದ ಹಂಗು ತೊರೆದು ಆ ಆರೂ ಜನರನ್ನು ಮುಗಿಸುವುದರಲ್ಲಿ ನಮ್ಮವರು ಯಶಸ್ವಿಯಾಗಿದ್ದಾರೆ. ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ಆದರೆ ಬಹಳ ಮುಖ್ಯವಾಗಿರುವಂಥದ್ದು ಎಂದರೆ ಈ ಘಟನೆಯಾದ ಮೇಲೂ ನಮ್ಮಲ್ಲೂ ಸಹ ಪೋಲಿಸ್ ಅಧಿಕಾರಿಗಳು ಹುಬ್ಬಳ್ಳಿ, ಬೆಂಗಳೂರು, ಮಂಗಳೂರು, ಈ ಕಡೆಯೆಲ್ಲಾ ಸೂಕ್ಷ್ಮ ಪ್ರದೇಶವೆಂದು ಕಟ್ಟೆಚ್ಚರ ವಹಿಸಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಈಗ ತಾನೆ ಟಿ.ವಿ.ಯಲ್ಲಿ ಬರುತ್ತಿರುವುದನ್ನು ನಾನು ನೋಡಿಕೊಂಡು ಬಂದೆ. ಪೋಲಿಸ್ ವೇಷದಲ್ಲಿ ಲಷ್ಕರ್–ಎ–ತೊಯ್ಬಾಗೆ ಸಂಬಂಧಪಟ್ಟವರು ಇದನ್ನು ಮಾಡಿದ್ದಾರೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ. ಗುಜರಾತ್ ಅಕ್ಷರಧಾಮದ ಮೇಲೆ, ಮುಂಬೈ ಸರಣಿದಾಳಿ ಇವೆಲ್ಲವನ್ನೂ ಸಹ ಈ ಗುಂಪೇ ಮಾಡಿರುವಂಥಾದ್ದು. ತಮಗೆ ನೆನಪು ಇರಬಹುದು ಪಾರ್ಲಿಮೆಂಟ್‌ಗೆ ನುಗ್ಗಿದಂತಹ ಸಂದರ್ಭದಲ್ಲೂ ಸಹ ಈ ಲಷ್ಕರ್–ಎ–ತೊಯ್ಬಾದವರೇ ಅದಕ್ಕೆ ಜವಾಬ್ದಾರರು ಎನ್ನುವಂಥದ್ದು. ಅಂದರೆ ಮತ್ತೊಮ್ಮೆ ನಮ್ಮ ದೇಶದಲ್ಲಿ ಭಯೋತ್ಪಾದನೆಯನ್ನು ನಿಗ್ರಹ ಮಾಡುವಂಥಾದ್ದು ಎಲ್ಲೋ ಒಂದು ಕಡೆ ಕೊರತೆಯಾಗಿರುವುದರಿಂದ ಬಹುಶಃ ಭಯೋತ್ಪಾದನೆ ತರಬೇತಿಯನ್ನು ಪಾಕಿಸ್ತಾನ ಮಾಡಿ ಸಾವಿರಾರು ಜನರನ್ನು ಭಾರತಕ್ಕೆ ಕಳಿಸುತ್ತಿದ್ದರೂ ಸಹ ಕೇಂದ್ರ ಸರ್ಕಾರ ಈ ಕಡೆ ವಿಶೇಷವಾದ ಗಮನ ಕೊಡಲಿಲ್ಲ. ಪಾಕಿಸ್ತಾನದ ಜೊತೆ ಒಂದು ರೀತಿ ಮೃದು ಧೋರಣೆ

ತೆಗೆದುಕೊಂಡಿರುವಂಥದ್ದು ಇದಕ್ಕೆಲ್ಲಾ ಕಾರಣ ಎನ್ನುವಂಥ ಆತಂಕ ಇವತ್ತು ಎಲ್ಲಾ ಕಡೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ನಾಳೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ದೇಶಾದ್ಯಂತ ಎಲ್ಲಾ ಕಡೆಗೂ ಪ್ರತಿಭಟನೆಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ನಮ್ಮ ಶ್ರದ್ಧಾ ಕೇಂದ್ರಗಳು ಹಿಂದೂಗಳ ಮಾನಬಿಂದು. ಅಯೋಧ್ಯೆ ಮೇಲೆ ಲಷ್ಕರ್–ಎ–ತೊಯ್ಬಾ ಭಯೋತ್ಪಾದಕರೇನು ನುಗ್ಗಿದ್ದಾರೆ, ಅವರನ್ನು ಭದ್ರತಾ ಸಿಬ್ಬಂದಿಗಳು ಕೊಂದು ಹಾಕಿದ್ದರೂ ಸಹ, ಬಹುಶಃ ಪ್ರಪಂಚದ ಅತಿ ದೊಡ್ಡ ಈ ಪ್ರಜಾತಂತ್ರ ದೇಶದಲ್ಲಿ, ಬಾರತದ ಪಾರ್ಲಿಮೆಂಟ್ ಮೆಲೆ ಏನು ಈ ಲಷ್ಕರ್–ಎ–ತೊಯ್ಬಾದ ಏಜೆಂಟರಾದ ಭಯೋತ್ಪಾದಕರು ಆಕ್ರಮಣವನ್ನೇನು ನಡೆಸಿದ್ದಾರೋ, ಇದು ಒಂದು ರೀತಿಯಲ್ಲಿ ದೇಶದ ಸುರಕ್ಷತೆಗೇ ಧಕ್ಕೆ ಬಂದಿರುವಂಥಾದ್ದು. ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರು ನಮ್ಮ ದೇಶವನ್ನು ಅಬದ್ರಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿರುವಂಥಾದ್ದು, ಮುಂಬೈನಲ್ಲಿ ನಡೆದಂತಹ ಸರಣಿ ಬಾಂಬ್ ಸ್ಫೋಟ, ದೆಹಲಿಯಲ್ಲಿ ನಡೆದಂತಹ ಬಾಂಬ್ ಸ್ಫೋಟ, ಚೆನ್ನೈನಲ್ಲಿ ನಡೆದಂತಹ ಬಾಂಬ್ ಸ್ಫೋಟಗಳನ್ನು ನಾವು ಮರೆಯುತ್ತಿದ್ದಂತಹ ಕಾಲದಲ್ಲಿ ಈ ತರಹದ ಘಟನೆಗಳು ಮತ್ತೆ ಮತ್ತೆ ಆಗುತ್ತಲೇ ಇವೆ. ದೇಶದ ಪ್ರಮುಖ.....

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ ಎಂಬುದೇ ಗೊತ್ತಿಲ್ಲ. ಸರ್ಕಾರಕ್ಕೆ ಯಾವುದೇ ನೋಟೀಸು ಇಲ್ಲ. ಯಾವ ರೂಲ್ ಕೆಳಗಡೆ, ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆ ಎಂಬುದನ್ನು ದಯಮಾಡಿ ಅವರು ತಿಳಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದೇನೆ. ತಾವು ಸ್ವಲ್ಪ ಕೇಳಿ, ನಾನು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ದಯವಿಟ್ಟು ಸ್ವಲ್ಪ ನಾನು ಹೇಳುವುದನ್ನು ಕೇಳಿ. ನಾನು ತಾವು ಪ್ರಸ್ತಾಪ ಮಾಡುವುದಕ್ಕೆ ವಿರೋಧ ಮಾಡುತ್ತಿಲ್ಲ. ತಾವು ಇರುವ ವಿಚಾರವನ್ನು ಹೇಳಿ. ತಾವು ಹೇಳುತ್ತಿರುವುದು ಏನು ಎಂಬುದು ಗವರ್ನಮೆಂಟ್‌ಗೆ ಗೊತ್ತಾಗಬೇಕಲ್ಲವೇ? ಒಂದು ನೋಟೀಸು ಇಲ್ಲ, ಏನೂ ಇಲ್ಲ. ನಮಗೇನು ಗೊತ್ತಿಲ್ಲ. ಪಾಕಿಸ್ತಾನ್, ಭಾರತ ದೇಶ, ಇಂಡಿಯಾ, ಮುಂತಾಗಿ ಏನೇನೋ ಹೇಳುತ್ತಿದ್ದೀರಿ. ನಾವು ಅದಕ್ಕೆ ಹೇಗೆ ಉತ್ತರ ಕೊಡುವುದು?.....

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ದೇಶಪಾಂಡೆಯವರೇ, ತಾವು ಸ್ವಲ್ಪ ತಡೆಯಿರಿ. ನಾನು ಹೇಳುತ್ತಿಲ್ಲ. ಬಹಳ ಮುಖ್ಯವಾಗಿ ಅಯೋಧ್ಯೆಯ ರಾಮ ಮಂದಿರದ ಮೇಲೆ ಉಗ್ರಗಾಮಿಗಳು ನುಗ್ಗಿ, ಅಲ್ಲಿ ಐದು ಜನರನ್ನು ನಮ್ಮ ಪೋಲಿಸ್ ಸಿಬ್ಬಂದಿ, ಭದ್ರತಾ ಸಿಬ್ಬಂದಿಯವರು ಹೊಡೆದು ಹಾಕಿದ್ದಾರೆ. ಇದರ ಪರಿಣಾಮ ನಾವು ಈಗ ತಾನೇ ಟಿ.ವಿ. ನೋಡುತ್ತಿರುವಂತಹ ಸಂದರ್ಭದಲ್ಲಿ ಇಡೀ ದೇಶದಲ್ಲಿ ಕಟ್ಟೆಚ್ಚರ ವಹಿಸಬೇಕು, ಸೂಕ್ಷ್ಮ ಪ್ರದೇಶಗಳಲ್ಲಿ ಎಚ್ಚರ ವಹಿಸಬೇಕು, ಹುಬ್ಬಳ್ಳಿ, ಬೆಂಗಳೂರು ಈ ಕಡೆಯೆಲ್ಲಾ ಗಮನ ಹರಿಸಬೇಕು, ಈ ರೀತಿ ಪೋಲಿಸ್ ಕಮಿಷನರ್ ಸೂಚನೆ ಕೊಟ್ಟರು. ಎಂಬುದನ್ನು ಟಿ.ವಿಯಲ್ಲಿ ನೋಡಿಕೊಂಡು ಈಗತಾನೇ ನಾನು ಬಂದೆ. ಈ ಒಂದು ವಿಶೇಷವಾದಂತಹ ಸಂದರ್ಭ ಇರುವಂತಹ ಸಂದರ್ಭದಲ್ಲಿ, ಕರ್ನಾಟಕದಲ್ಲಿ ಆ ರೀತಿ ಬಂದೋಬಸ್ತು ಮಾಡುವ ಕಡೆ ವಿಶೇಷವಾದಂತಹ ಗಮನ ಕೊಟ್ಟಿದ್ದಾರೆಯೇ? ಈ ಭಯೊತ್ಪಾದನೆ, ಉಗ್ರಗಾಮಿಗಳ ದಾಳಿಯನ್ನು ತಡೆಯುವುದಕ್ಕೆ ವಿಶೇಷವಾದಂತಹ ಪ್ರಯತ್ನ ಇಲ್ಲಿ ಏನಾದರೂ ಆಗುತ್ತಿದೆಯೇ? ಈ ಕಡೆಗೆ ಸರ್ಕಾರದ ಗಮನವನ್ನು ಸೆಳೆಯುವಂತಹ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಅಟಲ್‌ಜಿಯವರು ಇತ್ತೀಚೆಗೆ ಮಾನ್ಯ ಮನಮೋಹನ್ ಸಿಂಗ್‌ರವರಿಗೆ ಒಂದು ಪತ್ರ ಬರೆದು, ಪಾಕಿಸ್ತಾನದ ಜೊತೆಗೆ ತಾವು ಮೃದು ಧೋರಣೆ ತಾಳುತ್ತಿದ್ದೀರಿ, ಇದಕ್ಕೆ ನಾವು ಬಾರೀ ಬೆಲೆ ತೆರಬೇಕಾಗುತ್ತದೆ ಎನ್ನುವಂಥಹ ಎಚ್ಚರಿಕೆ ಮಾತನ್ನು ಒಂದೂವರೆ ತಿಂಗಳ ಹಿಂದೆ ಹೇಳಿದ್ದರು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತತ್‌ತಕ್ಷಣ ಈ ಭೂಗತ ಚಟುವಟಿಕೆಗಳನ್ನು ತಡೆಯುವಂತಹ ಪ್ರಯತ್ನ ಮಾಡಬೇಕು, ವಿಶೇಷವಾಗಿ ಬೆಂಗಳೂರು, ಈ ರೀತಿಯ ಭೂಗತ ದೊರೆಗಳಿಗೆ ಒಂದು ತಂಗುದಾಣವಾಗಿದೆ ಎನ್ನುವಂತಹ ವಾತಾವರಣ ಇರುವಂತಹ ಸಂದರ್ಭದಲ್ಲಿ ಅನೇಕ ಘಟನೆಗಳೂ ಇಲ್ಲಿ ನಡೆದಿರುವಂತಹ ಈ ಸಂದರ್ಭದಲ್ಲಿ ಇವತ್ತು ಎಲ್ಲಾ ಇಡೀ ದೇಶದ ಪ್ರಮುಖ ನಗರಗಳಲ್ಲಿ ಕಟ್ಟೆಚ್ಚರ ವಹಿಸುವಂತಹ ಪ್ರಯತ್ನಗಳು ನಡೆಯುತ್ತಿರುವಂತಹ ಸಂದರ್ಭದಲ್ಲಿ, ನಮ್ಮ ರಾಜ್ಯದಲ್ಲಿ ಸುಮಾರು 10 ಸಾವಿರ ವಿದೇಶಿಗರಿದ್ದಾರೆ. ಅವರು ಅಕ್ರಮ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎನ್ನುವಂಥಹ ಮಾತನ್ನು ನಾವು ಕೇಳುತ್ತಿದ್ದೇವೆ. ಇಂತಹ ಒಂದು ವಿಶೇಷವಾದಂತಹ ಸಂದರ್ಭದಲ್ಲಿ, ಸರ್ಕಾರ ಅಥವಾ ನಮ್ಮ ಪೋಲಿಸ್

ಇಲಾಖೆ ಇಲ್ಲೇನಾದರೂ ಬಂದೋಬಸ್ತ್ ಏರ್ಪಡಿಸುವುದು, ಆ ಕಡೆಗೆ ಸೂಕ್ಷ್ಮವಾದಂತಹ ಕ್ರಮ ತೆಗೆದುಕೊಳ್ಳುವುದು, ಕಟ್ಟೆಚ್ಚರ ವಹಿಸುವಂಥಾದ್ದು ಮಾಡುತ್ತಿದೆಯೇ? ಏಕೆಂದರೆ, ಇಡೀ ದೇಶದಲ್ಲಿ ಒಂದು alert ಮಾಡುತ್ತಿರುವಂತಹ ಸಂದರ್ಭದಲ್ಲಿ ಎಲ್ಲಿ ಏನು ಬೇಕಾದರೂ ಘಟನೆಗಳು ಆಗಬಹುದು ಎನ್ನುವಂಥಹ ಸಂದರ್ಭ ಇರುವಂಥಹ ಸಮಯದಲ್ಲಿ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂಥಹ ಪ್ರಯತ್ನಗಳನ್ನೇನಾದರೂ ಮಾಡುತ್ತಿದ್ದಾರೆಯೇ? ಈ ದೇಶದ್ರೋಹಿ ಚಟುವಟಿಕೆಗಳಿಗೆ ಅವಕಾಶವಾಗದಂತೆ, ಇಲ್ಲೇನು ಹತ್ತು ಸಾವಿರಕ್ಕೂ ಹೆಚ್ಚು ಜನ ವಿದೇಶೀಯರು ಇಲ್ಲಿ ಬಂದು ನೆಲೆಸಿದ್ದಾರೆ ಎನ್ನುವಂಥಹ ವಾತಾವರಣ ಇಲ್ಲಿ ಇರಬೇಕಾದರೆ, ಇಲ್ಲೂ ಸಹ ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಉಡುಪಿ, ಮಂಗಳೂರು ಮತ್ತು ಕಾರವಾರ ಇಲ್ಲೆಲ್ಲಾ ಕಟ್ಟೆಚ್ಚರ ವಹಿಸಬೇಕೆಂದು ಸೂಚನೆ ಕೊಡಬೇಕಾಗಿದೆ. ಸರ್ಕಾರ ಈ ದಿಸೆಯಲ್ಲಿ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಇಲ್ಲಿ ಏನಾಗಿದೆ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವುದನ್ನು ತಾವು ಹೇಳಬೇಕು, ಅದಕ್ಕಾಗಿ, ಇದನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಆ) ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮಂಡನೆ ಚರ್ಚೆ ಪೂರ್ತಿಯಾಗಿಲ್ಲ ಮತ್ತು ಸರ್ಕಾರ ಸ್ಪಷ್ಟ ಭರವಸೆಯನ್ನು ನೀಡಬೇಕು ಎನ್ನುವುದರ ಬಗ್ಗೆ:

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, adjournment motion ಇನ್ನೂ conclude ಆಗಿಲ್ಲ. ಮಾನ್ಯ ಯಡಿಯೂರಪ್ಪನವರೆ, ತಾವು ಅದರ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಭಾವಿಸಿ ನಾವು ಸುಮ್ಮನೆ ಕುಳಿತುಕೊಂಡಿದ್ದೆವು. ಕುಡಿಯುವ ನೀರಿಗೆ ಶಾಶ್ವತವಾದ ಸಮಿತಿ ಮಾಡಬೇಕು ಎಂದು ಕೇಳಿದ್ದೆವು. ಅದು ಏನಾಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಚರ್ಚೆಯಾಗಿ ಇನ್ನೂ ಮುಗಿಯಲಿಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅದಿನ್ನೂ ಮುಗಿದಿಲ್ಲ ಸಾರ್. ಅದಕ್ಕೆ ಸರ್ಕಾರದವರು ಉತ್ತರ ಹೇಳಿಲ್ಲ.